ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ ಹಿಂದಿನ 5 ವರ್ಷಗಳ ಅಂದಾಜು.	ಚಾಲ್ತಿ.
ಅಕ್ಕಿ ರೂಪಾಯಿ 1ಕ್ಕೆ	7	6½ ಯಿಂದ 7ರ ವರಿಗೆ ಸೇರುಗಳು.
ರಾಗಿ	2	14½ ಯಿಂದ 15½ ವರಿಗೆ ಸೇರುಗಳು.

ವ್ಯವಸಾಯ ಕೆಲಸ :—ರಾಗಿ ತೆನೆ ಬಡಿಯುವದು.

ದನಗಳು ಬಳ್ಳೀ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರು ಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ರಾಗಿ ಮತ್ತು ಇನ್ನೂ ಇತರ ಧಾನ್ಯಗಳು ತೆನೆ ಬಡಿಯಲ್ಪಡುತ್ತಿವೆ. ಬೆಂಗಳೂರು, ಕಾಡುಗೋಡಿ ಹಳ್ಳಿ ಮತ್ತು ದೇವನಹಳ್ಳಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಬ್ಬನ್ನು ಆಲೆ ಆಡುತ್ತಿದ್ದಾರೆ.

ನಿಂತಿರುವ ಪೈರುಗಳು—ಕಬ್ಬು, ಹಿಪ್ಪಲಿನೇರಳೆ ಮತ್ತು ವೈಶಾಖಿ ಭತ್ತ ಇವುಗಳು ಬಳ್ಳೀ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಬೆಂಗಳೂರಿನ ಕೆಲವು ಕಡೆಗಳಲ್ಲಿ ಕಬ್ಬು.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ನಾಕಾದಷ್ಟು ಆಹಾರ ಜಿನಸು ಇದೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು ಬಳ್ಳೀ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಬೌರಿಂಗ್‌ಪೇಟೆ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮತ್ತು ಗುಡಿಬಂಡೆ ಇವು ಹೊರತು, ಡಿಸ್ಟ್ರಿಕ್ಟಿನ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿ ವೈಶಾಖಿ ಭತ್ತ; ಮತ್ತು ಬೌರಿಂಗ್‌ಪೇಟೆ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮತ್ತು ಗುಡಿಬಂಡೆಯಲ್ಲಿ ಕಬ್ಬು.

ಕುಯ್ಯಲಾದ ಪೈರುಗಳು—ಕೋಲಾರ ಮತ್ತು ಶ್ರೀನಿವಾಸಪುರಗಳಲ್ಲಿ ಅವರೆ ಮತ್ತು ಹುರುಳಿ; ಶಿಡ್ಲಘಟ್ಟ ಮತ್ತು ಶ್ರೀನಿವಾಸಪುರಗಳಲ್ಲಿ ರಾಗಿ; ಕೋಲಾರ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮತ್ತು ಶ್ರೀನಿವಾಸಪುರಗಳಲ್ಲಿ ಕಬ್ಬು.

ಉತ್ಪತ್ತಿಯ ಅಂದಾಜು :—

ಕೋಲಾರ, ಚಿಂತಾಮಣಿ, ಮುಳಬಾಗಲು, ಗೋರೀಬಿದನೂರ, ಚಿಕ್ಕಬಳ್ಳಾಪುರ	12 ಆಣೆ	ಬೌರಿಂಗ್‌ಪೇಟೆ, ಭತ್ತ	6 ರಿಂದ 12 ಆಣೆ ವರಿಗೆ.
		ಹುರುಳಿ ...	4 ರಿಂದ ಡಿಟೋ
		ಕಬ್ಬು	4 ರಿಂದ ಡಿಟೋ
		ಬಾಗೇಪಲ್ಲಿ	10 ಆಣೆ.
		ಶಿಡ್ಲಘಟ್ಟ, ಕಬ್ಬು	2 ಆಣೆ.
		ರಾಗಿ	13 ಆಣೆ.
ಶ್ರೀನಿವಾಸಪುರ ಮತ್ತು ಗುಡಿಬಂಡೆಗಳಲ್ಲಿ—		...	8 ರಿಂದ 12 ಆಣೆ ವರೆಗೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಬವರಿಂಗಪೇಟೆ ತಾಲ್ಲೂಕು ಕೋಲಾರದ ಚಿನ್ನದ ಗಣಿಗಳಲ್ಲಿ ಪ್ಲೇಗ್ ಕೇಸು ಹೊರತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ತೆನೆ ಬಡಿಯುವದು ವೈಶಾಖಿ ಭತ್ತ ಬಿತ್ತುವದು.

ನಿಂತಿರುವ ಪೈರುಗಳು—ಬಳ್ಳೀ ಸ್ಥಿತಿಯಲ್ಲಿವೆ; ಆದರೆ, ತಿಪಟೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತದ ಪೈರು ಕೆಟ್ಟುಪೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಚಿಕ್ಕನಾಯಕನಹಳ್ಳಿ, ಶೀರ್ಯ, ಪಾವಗಡ ಮತ್ತು ಕುಣಿಗಲ್ ಹೊರತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಭತ್ತ; ಕೊರಟಗೆರೆಯಲ್ಲಿ ಕಬ್ಬು.

ಕುಯ್ಯಲಾದ ಪೈರುಗಳು—

ಭತ್ತ—ತುಮಕೂರು, ಶೀರ್ಯ ಮತ್ತು ತಿಪಟೂರುಗಳಲ್ಲಿ.

ಕಬ್ಬು—ಶೀರ್ಯ, ಮದ್ದಗಿರಿ, ಕುಣಿಗಲ್, ಕೊರಟಗೆರೆ ಮತ್ತು ತುರುವೇಕೆರೆಗಳಲ್ಲಿ.

ಕಡಲೆ—ಶೀರ್ಯ, ಗುಬ್ಬಿ, ತಿಪಟೂರು ಮತ್ತು ಕುಣಿಗಲ್ ಇವುಗಳಲ್ಲಿ.

ಕೊತ್ತಂಬರಿ—ಗುಬ್ಬಿಯಲ್ಲಿ.

ಹುರುಳಿ—ಪಾವಗಡದಲ್ಲಿ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಚೆನಸಿ ಸಿಕ್ಕುತ್ತವೆ.

11. ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಪೋಲಿಯಲ್ಲಿ ಭಳಿ ಜ್ವರವೂ ಮತ್ತು ಜ್ವರವೂ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಾಕು.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ನಂಜನಗೂಡು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭೂವಿಯನ್ನು ಉತ್ತು, ಬಿತ್ತನೆಗೆ ತಯಾರ್ಮಾಡುತ್ತಾ ಇದ್ದಾರೆ. ಮೈಸೂರಿನ ಕೆಲವು ಭಾಗಗಳಲ್ಲಿ ರಾಗಿ ಮತ್ತು ಭತ್ತ, ಮಳವಳ್ಳಿಯ ಕೆಲವು ಭಾಗಗಳಲ್ಲಿ ಭತ್ತ ಮತ್ತು ಕೃಷ್ಣರಾಜಪೇಟೆಯ ಕೆಲವುಭಾಗಗಳಲ್ಲಿ ರಾಗಿಯು, ಇಪ್ಪುಗಳು ತೆನೆ ಬಿಡಿಯುತ್ತಿವೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—

ಚಾಮರಾಜನಗರ—ಕಡಲೆ.

ಹೆಗ್ಗಡದೇವನಕೋಟೆ—ಕಡಲೆ ಮತ್ತು ಅವರೆ.

ಟಿ॥ ನರಸೀಪುರ—ಕಬ್ಬು.

ಮಳವಳ್ಳಿ—ಭತ್ತ ಮತ್ತು ರಾಗಿ 4 ರಿಂದ 12 ಆಣೆ ವರಿಗೆ.

10. ಕಾಲದ ಆಯತಿಯು ಚೆನ್ನಾಗಿದೆ. ರೈತರಲ್ಲೂ ಮತ್ತು ವರ್ತಕರಲ್ಲೂ ಸಾಕಾದಷ್ಟು ಆಹಾರ ಚೆನಸಿ ಇವೆಯೆಂದು ರಿಪೋರ್ಟಾಗಿದೆ.

11. ಮೈಸೂರು, ಚಾಮರಾಜನಗರ, ಹುಣಸೂರು, ಗುಂಡ್ಲುಪೇಟೆ, ನಂಜನಗೂಡು ಮತ್ತು ಮಳವಳ್ಳಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾವೂ ಮತ್ತು ಹೆಗ್ಗಡದೇವನಕೋಟೆಯ ಕೆಲವು ಭಾಗಗಳಲ್ಲಿ ಜ್ವರವೂ ಇರುವದು ಹೊರ್ತು, ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು :—ಅರಕಲ್‌ಗೂಡು ಮತ್ತು ಚೆನ್ನರಾಯಪಟ್ಟಣ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಉಳುತ್ತಲಿದ್ದಾರೆ.

ನಿಂತಿರುವ ಪೈರುಗಳು—ವೈಶಾಖಿ, ಭತ್ತ, ಕಬ್ಬು, ಹರಳು, ಕಡಲೆ ಮತ್ತು ಮುಂಪ ಇಪ್ಪುಗಳು ಬಳ್ಳೀ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು ಮತ್ತು ಇಪ್ಪುಗಳ ಉತ್ಪತ್ತಿ :—

ಅರಕಲ್‌ಗೂಡು	...	ಭತ್ತ	4 ರಿಂದ 12 ಆಣೆ ವರಿಗೆ.
		ರಾಗಿ	,, ,,
		ಹುರುಳಿ	,, 8 ಆಣೆ ವರಿಗೆ.
		ಕಡಲೆ	... 8 ರಿಂದ 10 ಆಣೆ ವರಿಗೆ.
ಬೇಲೂರು	...	ಭತ್ತ	12 ಆಣೆ.
		ಕಡಲೆ.	

ಚೆನ್ನರಾಯಪಟ್ಟಣ—ಕಡಲೆ, ಹರಳು ಮತ್ತು ಕಬ್ಬು.

ಅರಕೀಕೆರೆ—ಕಡಲೆ.

ಹೊಳೇನರಸೀಪುರ ಕೆರೆ ಕೆಳಗೆ ಭತ್ತ ಮತ್ತು ಕಡಲೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಚೆನಸಿ ಸಿಕ್ಕುತ್ತವೆ.

11. ಹಾಸನ, ಬೇಲೂರು ಮತ್ತು ಹೊಳೇನರಸೀಪುರ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗೂ ಮತ್ತು ಮುಂ ಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಿಡುಬೂ ಇವುಗಳು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಶಿವಮೊಗ್ಗ, ಚೆನ್ನಗಿರಿ ಮತ್ತು ಶಿಕಾರಿಪುರ ಈ ತಾಲ್ಲೂಕುಗಳಲ್ಲಿ ಕಡಲೆಯೂ ಮತ್ತು ಎಲ್ಲಾ ತಾಲ್ಲೂಕುಗಳಲ್ಲಿಯೂ ಕಬ್ಬೂ ಇವುಗಳು ಬಳ್ಳೀ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಶಿವಮೊಗ್ಗ ತಾಲ್ಲೂಕಿನಲ್ಲಿ ಕಡಲೆ ಕುಯ್ಯಲು ಆಗುತ್ತಿದೆ. ತೊಗರು, ಕಡಲೆ ಮತ್ತು ಅವರೆ ಈ ಮೂರುಗಳೆ ಕುಯ್ಯಲು ಹೊನ್ನಾಳಿ ತಾಲ್ಲೂಕಿನಲ್ಲಿ ಮುಗಿದು ಇದೆ. ಶಿವಮೊಗ್ಗ, ಚೆನ್ನಗಿರಿ, ಶಿಕಾರಿಪುರ, ಸೊರಬ, ಸಾಗರ, ನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿಯೂ ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಕಬ್ಬನ್ನು ಆಲೆ ಆಡುತ್ತಲಿದಾರೆ.

ಬಿತ್ತನೆಯಾದ ಪೈರುಗಳು— ರಿವಮೊಗ್ಗ, ಸೊರಬ, ಸಾಗರ, ನಗರ ಮತ್ತು ಶೀಕಾರಿಪುರ ತಾಲ್ಲೂಕು ನಾಟುತ್ತಿದ್ದಾರೆ.

10. ಕಾಲದ ಅಯತಿಯು ಚೆನ್ನಾಗಿದೆ. ಸಾಕಾದಷ್ಟು ಆಹಾರ ಬೆಳೆ ಬೆಳೆಯಬಹುದೆ.

11. ಜಾನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕಡೂರು.

8. ಬಿಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು ಕಡೂರಿನಲ್ಲಿ ಮೊದಲನೆಯ ಉಳುಮೆ ಕೆಲಸಗಳು ಪುರೂ ಆಗಿರುತ್ತೆ.
ನಿಂತಿರುವ ಪೈರುಗಳು —ತರೀಕೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಕಬ್ಬು; ಕೊಪ್ಪ ಕಬ್ಬು ಮತ್ತು ಮೆಣಸು; ಕಡೂರು ತಾಲೂಕಿನಲ್ಲಿ ಜೋಳ, ಕಾರ್ ಭತ್ತ, ಗೋಧಿ, ಕಡಲೆ, ತೊಗರಿ; ಎಡೇಹಳ್ಳಿ ಸಬ್ ತಾಲ್ಲೂಕಿನಲ್ಲಿ ಕಬ್ಬು ಮತ್ತು ಅಡಿಕೆ; ಮತ್ತು ಮೂಡಿಗೆರೆಯಲ್ಲಿ ಕಾಳು ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—
ತರೀಕೆರೆ ತಾಲ್ಲೂಕು ಭತ್ತ, ಕಬ್ಬು, ಕಡಲೆ, ರಾಗಿ ಮತ್ತು ಜೋಳ, ಉತ್ಪತ್ತಿ 4 ರಿಂದ 12 ಆಣೆ
ಕೊಪ್ಪ ತಾಲ್ಲೂಕು ಯಾಲಕ್ಕಿ, ಕಾಫಿ, ಅಡಿಕೆ ವಕ್ಕು ಕಬ್ಬು, ಉತ್ಪತ್ತಿ 8 ರಿಂದ 12 ಆಣೆ ವರಗೆ
ಕಡೂರು ತಾಲ್ಲೂಕು—ಗೋಧಿ, ಕಡಲೆ, ಮತ್ತು ತೊಗರಿ, ಉತ್ಪತ್ತಿ 4 ರಿಂದ 14 ಆಣೆ ವರಗೆ.
ಮೂಡಿಗೆರೆ ತಾಲ್ಲೂಕು—ಅಡಿಕೆ ಮತ್ತು ಕಾಫಿ. ಉತ್ಪತ್ತಿ 4 ರಿಂದ 8 ಆಣೆ ವರಗೆ.
ಎಡೇಹಳ್ಳಿ ಸಬ್ ತಾಲ್ಲೂಕು—ಅಡಿಕೆ ಮತ್ತು ಭತ್ತ, ಉತ್ಪತ್ತಿ 10 ರಿಂದ 12 ಆಣೆ ವರಗೆ.

10. ಕಾಲದ ಅಯತಿಯು ಚೆನ್ನಾಗಿದೆ. ಆಹಾರ ಬೆಳೆ ಸಾಕು.

11. ಚಿಕ್ಕಮಗಳೂರು ಮತ್ತು ಎಡೇಹಳ್ಳಿ ಸಬ್ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಸಿಡುಬು ಇರುತ್ತಿತ್ತು ಜಾನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ಆದರೆ, ಮೂಡಿಗೆರೆ ತಾಲ್ಲೂಕು ಬೀಕಾಲ್ ಹೋಬಳಿಯಲ್ಲಿ ಸ್ವಲ್ಪವು "ಬೆಟ್ಟ ರೋಗ" ಹತ್ತಿದೆಯೆಂದೂ, ಅದರಿಂದ 4 ದನಗಳು ಸತ್ತುಹೋಗಿವೆ ಯೆಂದೂ, ಅದು ಹೆಚ್ಚಾಗಿ ಅ ವದಕ್ಕಾಗಿ ತಕ್ಕ ವಿಚಾರಣೆಗಳನ್ನು ಮಾಡಲ್ಪಡುತ್ತಿದೆಯೆಂದೂ ಮತ್ತು ಈ ವಿಷಯವಾಗಿ ಕ್ಯಾಟಲ್ ಪ್ಲೇಗ್ ಈ ಸಂಗತಿಗಳೆಲ್ಲಾ ತಿಳಿಯಿಸಲ್ಪಟ್ಟಿದೆಯೆಂದೂ, ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿಕ್ಕಮಗಳೂರ್.

8 ಬಿಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು —ಭತ್ತ, ಕಬ್ಬು ಮತ್ತು ಅರಳೇ ಇವುಗಳು ಒಳ್ಳೇ ಸ್ಥಿತಿಯಲ್ಲಿವೆ.
ಕುಯ್ಯಲಾಧ ಪೈರುದಳು ಮತ್ತು ಅವುಗಳ ಉತ್ಪತ್ತಿ : -
ಚಿಕ್ಕಮಗಳೂರ್, ಹಿರಿಯೂರು ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿ ಕಡಲೆ, ಉತ್ಪತ್ತಿ 4 ರಿಂದ 10 ಆಣೆ ವ
ಹಿರಿಯೂರು, ದೇವನಗೆರೆ ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿ ಬಿಳೇ ಜೋಳ ಉತ್ಪತ್ತಿ 4 ರಿಂದ 10 ಆ
ದೇವನಗೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಕಬ್ಬು ಉತ್ಪತ್ತಿ 8 ರಿಂದ 10 ಆಣೆ ವರಗೆ.
ಹೊಳಲ್ಕೆರೆ ತಾಲ್ಲೂಕಿನಲ್ಲಿ ರಾಗಿ ಮತ್ತು ಗೋಧಿ ಉತ್ಪತ್ತಿ 12 ರಿಂದ 16 ಆಣೆ ವರಗೆ.
ಹರಿಹರದ ಸಬ್ ತಾಲ್ಲೂಕಿನಲ್ಲಿ ಅರಳೆ, ಉತ್ಪತ್ತಿ 12 ಆಣೆ.

10. ಕಾಲದ ಅಯತಿಯು ಚೆನ್ನಾಗಿದೆ. ಆಹಾರ ಬೆಳೆ ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಜಿಂಗಳೂರು,
1907ನೆಯ ವರ್ಷದ ಮಾರ್ಚ್ 11ನೆಯ ತಾರೀಖು

ಎ. ರಂಗಸ್ವಾಮಿ ಐಯ
ರವಿನ್ಯೂ